ಲಕ್ಷ ರೂಪಾಯಿಗಳಿಗೋಸ್ಕರ ಕೇಂದ್ರ ಸರ್ಕಾರದ ರಾಷ್ಟ್ರೀಯ ಏರ್‌ಪೋರ್ಟ್ ಅಥಾರಿಟಿಯವರಿಗೆ ಪತ್ರವನ್ನು ಬರೆಯಲಾಗುತ್ತದೆ. ಅವರಿಂದ ಉತ್ತರ ಬಂದಮೇಲೆ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಇದನ್ನು ನಾವು ಫ್ಯಾಕ್ಸ್ ಮುಖಾಂತರ ಕೇಂದ್ರ ಸರ್ಕಾರಕ್ಕೆ ಕಳುಹಿಸುತ್ತೇವೆ. ಅವರು ಹಣವನ್ನು ಕೊಡುವುದಕ್ಕೆ ಆಗುವುದಿಲ್ಲವೆಂದರೆ ನಾವು ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

(ಈ) ಕಬ್ಬು ಕಾರ್ಖಾನೆಯಲ್ಲಿ ಕಬ್ಬು ಅರೆಯುವ ದಿನವನ್ನು ವಿಸ್ತರಿಸುವ ಬಗ್ಗೆ

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : ಮಾನ್ಯ ಅಧ್ಯಕ್ಷರೆ, ಕಬ್ಬು ಕಾರ್ಖಾನೆಯ ವಿಚಾರವಾಗಿ ಉತ್ತರ ಬಂದಿದೆ, ಅದರ ಬಗ್ಗೆ ಸರ್ಕಾರದಿಂದ ಉತ್ತರ ಕೊಡಿಸಿ.

ಅಧ್ಯಕ್ಷರು : ಆಯಿತು.

ಶ್ರೀ ಕೆ.ಎನ್.ನಾಗೇಗೌಡ (ಬೃಹತ್ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೆ, ಮೈಸೂರು ಸಕ್ಕರೆ ಕಾರ್ಖಾನೆಯಲ್ಲಿ ಈ ಸಾಲಿನಲ್ಲಿ ಎಂಟು ಲಕ್ಷದ ಅರವತ್ತು ಸಾವಿರ ಟನ್ ಕಬ್ಬು ನೋಂದಾಯಿಸಿದ್ದಾರೆ. 8 ಲಕ್ಷ 11 ಸಾವಿರ ಟನ್ ಕಬ್ಬು ಅರೆದಿದ್ದಾರೆ, ಉಳಿದಂತಹ 49 ಸಾವಿರ ಟನ್ ನೋಂದಾಯಿತ ಕಬ್ಬನ್ನು ಅರೆಯುವಂಥಾದ್ದಕ್ಕೆ ದಿ : 31.3.99ರವರೆಗೆ ಕ್ರಮ ತೆಗೆದುಕೊಳ್ಳಲಾಗುತ್ತದೆ.

(ಉ) ತೀರ್ಥಹಳ್ಳಿಯ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಸೂತಿ ತಜ್ಞರ ನೇಮಕ

+ಶ್ರೀ ಆರಗಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೆ, ನಾನು ಪ್ರಸ್ತಾಪ ಮಾಡುವ ವಿಷಯಕ್ಕೆ ಸಂಬಂಧಪಟ್ಟ ಆರೋಗ್ಯ ಸಚಿವರು ಸಭೆಯಲ್ಲಿ ಇಲ್ಲ. ಆದರೂ ಮಾನ್ಯ ಮುಖ್ಯಮಂತ್ರಿಯವರು ಇದ್ದಾರೆ, ಅವರು ನಮ್ಮ ಕ್ಷೇತ್ರದ ಕಷ್ಟವನ್ನು ಅರ್ಥಮಾಡಿಕೊಳ್ಳುತ್ತಾರೆಂದು ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನನ್ನ ಕ್ಷೇತ್ರದ ಸರ್ಕಾರಿ ಆಸ್ಪತ್ರೆಯಲ್ಲಿ ಹೆರಿಗೆಗೆ ಬಂದಂಥ ಮಹಿಳೆಗೆ ಅಲ್ಲಿರತಕ್ಕಂಥ ಸಿಬ್ಬಂದಿ ವರ್ಗದವರು ಹಿಂಸೆ ಕೊಟ್ಟು ಆ ಮಹಿಳೆ ಮರಣವಪ್ಪುವ ಹಾಗೆ ಮಾಡಿದ್ದಾರೆ ಎಂದು ನಾನು ಒಂದು ವರ್ಷದ ಹಿಂದೆ ಇದೇ ಶಾಸನ ಸಭೆಯಲ್ಲಿ ಚರ್ಚೆ ಮಾಡಿದ್ದೆ. ಸರ್ಕಾರ ತನಿಖೆ ಮಾಡಿ ಅಲ್ಲಿರುವಂಥ ನಾಲ್ಕು ಜನ ದಾದಿಯರನ್ನು ಮತ್ತು ಒಬ್ಬ ಮಹಿಳಾ ವೈದ್ಯರನ್ನು ಸಸ್ಪೆನ್‌ಷನ್‌ನಲ್ಲಿ ಇಟ್ಟಿತ್ತು. ಇತ್ತೀಚೆಗೆ ಸರ್ಕಾರ ಆದೇಶ ಮಾಡಿ ಅವರೆಲ್ಲರನ್ನೂ ಕೂಡ ಪುನಃ ಕೆಲಸಕ್ಕೆ ನೇಮಕ ಮಾಡಿಕೊಂಡಿದ್ದಾರೆ. ಕಳೆದ ಒಂದು ವರ್ಷದಿಂದ ನಮ್ಮ ಆಸ್ಪತ್ರೆಯಲ್ಲಿ ಪ್ರಸೂತಿ ತಜ್ಞರು, ಮಹಿಳಾ ವೈದ್ಯರು ಇಲ್ಲ. ಇದರ ಪರಿಣಾಮ ಏನಾಗಿದೆ ಎಂದರೆ, ಪ್ರತಿದಿವಸ ಸುಮಾರು 200 ರಿಂದ 250 ರೋಗಿಗಳು, ವಿಶೇಷವಾಗಿ ದಲಿತ ಮಹಿಳೆಯರು ಮತ್ತು ಬಡವರು ನಮ್ಮ ತೀರ್ಥಹಳ್ಳಿಯ ಜೆ.ಸಿ.ಆಸ್ಪತ್ರೆಗೆ ಚಿಕಿತ್ಸೆ ಪಡೆಯಲು ಬರುತ್ತಾರೆ. ಕೇವಲ ತೀರ್ಥಹಳ್ಳಿಯಿಂದ ಮಾತ್ರವಲ್ಲ, ಹೊಸನಗರ, ಎನ್.ಆರ್.ಪುರ, ಶೃಂಗೇರಿ ಮತ್ತು ಕೊಪ್ಪ ತಾಲ್ಲೂಕುಗಳಿಂದಲೂ ಕೂಡ ಬಡವರು ಚಿಕಿತ್ಸೆಗಾಗಿ ಅಲ್ಲಿಗೆ ಬರುತ್ತಾರೆ. ಅವರು ಇವತ್ತು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ಆಗುತ್ತಿಲ್ಲ. ಮಹಿಳೆಯರಿಗೆ ಹೆರಿಗೆ ಇವತ್ತು ಆಸ್ಪತ್ರೆಯಲ್ಲಿ ಆಗುತ್ತಿಲ್ಲ. ಇದರ ಪರಿಣಾಮವಾಗಿ ಕಳೆದ ಎರಡು ವಾರದ ಹಿಂದೆ ಒಬ್ಬ ದಲಿತ ಮಹಿಳೆಗೆ

ತೀರ್ಥಹಳ್ಳಿಯ ಬೀದಿಯ ಮೇಲೆ ಹೆರಿಗೆಯಾಯಿತು. ಅಲ್ಲಿರತಕ್ಕಂಥ ಎರಡು ಖಾಸಗಿ ನರ್ಸಿಂಗ್ ಹೋಂಗಳಿಗೆ ಹೋಗಿ, ಅವರು ವಿಧಿಸತಕ್ಕಂಥ 10- 12 ಸಾವಿರ ರೂಪಾಯಿಗಳ ಚಾರ್ಜನ್ನು ಕೊಟ್ಟು ಹೆರಿಗೆ ಮಾಡಿಸಿಕೊಂಡು ಬರುವ ಪರಿಸ್ಥಿತಿಯಲ್ಲಿ ಇಲ್ಲದೇ ಇರತಕ್ಕಂಥ ಬಡಜನರಿಗೆ ಇದರಿಂದ ಗೋಳಾಗಿದೆ. ಇವತ್ತು ಅಲ್ಲಿರತಕ್ಕಂಥ ಸಾರ್ವಜನಿಕರು ನನ್ನ ಮತ್ತು ಸರ್ಕಾರದ ವಿರುದ್ಧ ಬೀದಿಗೆ ಇಳಿದು ಹೋರಾಟ ಮಾಡತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಅಲ್ಲಿಗೆ ಒಬ್ಬ ಪ್ರಸೂತಿ ತಜ್ಞರನ್ನು ಹಾಕಿ ಎಂದು ನಾನು ಕಳೆದ ಒಂದು ವರ್ಷದಿಂದ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಮಂತ್ರಿಗಳು ಹಾಕುತ್ತಿದ್ದಾರೆ. ಆದರೆ ಅವರು ಮತ್ತೆ ಪ್ರಭಾವ ಬೀರಿ ಕ್ಯಾನ್ಸಲೇಷನ್ ಮಾಡಿಸಿಕೊಂಡು ಬೆಂಗಳೂರಿನಲ್ಲಿದ್ದಾರೆ. ಅಲ್ಲಿಗೆ ಯಾರೂ ಕೂಡ ಬರುತ್ತಿಲ್ಲ. ಆದೇಶವಾಗುತ್ತದೆ, ಆದರೆ ಅವರು ಅದನ್ನು ರದ್ದು ಮಾಡಿಸಿಕೊಂಡು ಬರುತ್ತಿದ್ದಾರೆ. ದಯಮಾಡಿ ನನ್ನ ಕ್ಷೇತ್ರವಾದ ತೀರ್ಥಹಳ್ಳಿಯ ಜಯಚಾಮರಾಜೇಂದ್ರ ಸರ್ಕಾರಿ ಆಸ್ಪತ್ರೆಗೆ ಒಬ್ಬ ಪ್ರಸೂತಿ ತಜ್ಞರನ್ನು ತತ್‌ಕ್ಷಣವೇ ಕಳುಹಿಸಿಕೊಡಬೇಕು, ಅಲ್ಲಿರುವಂಥ ಬಡವರಿಗೆ ಸಹಾಯ ಮಾಡಬೇಕೆಂದು ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ.

ಡಾ॥ ಎಂ. ಶಂಕರನಾಯಕ್ (ವೈದ್ಯಕೀಯ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೇ, ಪ್ರಸೂತಿ ತಜ್ಞರ ಹುದ್ದೆಗಳು ಅನೇಕ ಕಡೆ ಖಾಲಿ ಇರುವ ಬಗ್ಗೆ ನಿಮಗೂ ಅನುಭವ ಇದೆ, ನಮಗೂ ಅದು ಆಗುತ್ತಿದೆ. ನಿಮಗೆ ಒಂದು ವಿಷಯ ಹೇಳಬೇಕೆಂದರೆ, ನನ್ನ ಕ್ಷೇತ್ರದಲ್ಲೇ ಒಬ್ಬ ಪ್ರಸೂತಿ ತಜ್ಞರನ್ನು ನೀವು ಅಲ್ಲೇ ಹೋಗಿ ರಿಪೋರ್ಟ್ ಮಾಡಿಕೊಳ್ಳಬೇಕು, ಟ್ರಾನ್ಸ್‌ಫರ್ ಮಾಡುವುದಿಲ್ಲ ಎಂದರೆ ಅವರು ರಾಜೀನಾಮೆ ಕೊಟ್ಟು ಹೋದರು. ಇಂಥ ಒಂದು ಪರಿಸ್ಥಿತಿ ಇದೆ. ಲೇಡಿ ಡಾಕ್ಟರ್‌ಗಳು ಗ್ರಾಮಾಂತರ ಪ್ರದೇಶಗಳಲ್ಲಿ ಮತ್ತು ತಾಲ್ಲೂಕು ಹೆಡ್‌ಕ್ವಾರ್ಟರ್‌ಗಳಿಗೆ ಹೋಗಿ ಕೆಲಸ ಮಾಡದೇ ಇರತಕ್ಕಂಥ ಅನೇಕ ಸಂದರ್ಭಗಳು ಉಂಟು. ಅವರು ಹೇಳಿದ ಹಾಗೆ ಹೆರಿಗೆ ಯಾರಿಗೂ ಕಾಯುವುದಿಲ್ಲ. ಅದು ರೋಡಿನಲ್ಲೂ ಆಗುತ್ತದೆ, ಬಸ್ಸಿನಲ್ಲೂ ಆಗುತ್ತದೆ, ರೈಲಿನಲ್ಲೂ ಆಗುತ್ತದೆ, ಜಮೀನಿನಲ್ಲಿ ಕೆಲಸ ಮಾಡುವಾಗಲೂ ಆಗುತ್ತದೆ, ಅದಕ್ಕೂ ಲೇಡಿ ಡಾಕ್ಟರ್‌ಗಳಿಗೂ ಸಂಬಂಧವಿಲ್ಲ. ಆದರೆ ಲೇಡಿ ಡಾಕ್ಟರ್‌ಗಳ ಹುದ್ದೆ ಅನೇಕ ಕಡೆಗಳಲ್ಲಿ ಖಾಲಿ ಇದೆ. ಅವನ್ನು ಭರ್ತಿ ಮಾಡಬೇಕಾಗಿದೆ. ಜನರಲ್ ಟ್ರಾನ್ಸ್‌ಫರ್‌ನಲ್ಲಿ ಅವುಗಳನ್ನು ಆದಷ್ಟು ಭರ್ತಿ ಮಾಡಬೇಕಾಗಿದೆ. ಜನರಲ್ ಟ್ರಾನ್ಸ್‌ಫರ್‌ನಲ್ಲಿ ಅವುಗಳನ್ನು ಆದಷ್ಟು ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳುತ್ತೇವೆ ಎಂದು ತಮ್ಮ ಮುಖಾಂತರ ಅವರಿಗೆ ತಿಳಿಸುತ್ತೇನೆ.

(ಊ) ರೈತರು ಬೆಳೆದಂಥ ತರಕಾರಿಗಳಿಗೆ ಬೆಂಬಲ ಬೆಲೆ ಘೋಷಣೆ

ಶ್ರೀ ವಿ.ಮುನಿಯಪ್ಪ (ಶಿಡ್ಲಘಟ್ಟ) : ಸನ್ಮಾನ್ಯ ಅಧ್ಯಕ್ಷರೇ, ಇತ್ತೀಚೆಗೆ ನಮ್ಮ ರೈತರು ಅದರಲ್ಲೂ ವಿಶೇಷವಾಗಿ ಸಣ್ಣ ರೈತರು ಬೆಳೆದಂಥ ಎಲ್ಲ ರೀತಿಯ ತರಕಾರಿಗಳು, ವಿಶೇಷವಾಗಿ ಟಮೊಟೊ, ಎಲೆಕೋಸು, ಕ್ಯಾರೆಟ್, ಬೀಟ್‌ರೋಟು ಬೆಳೆಗಳ ಬೆಲೆ ಕುಸಿದು ರೈತರು ಕಂಗಾಲಾಗಿರುವಂಥ ವಿಚಾರ ನಮ್ಮೆಲ್ಲರಿಗಿಂತ ನಿಮಗೆ ಪ್ರತ್ಯಕ್ಷವಾಗಿ ಮನವರಿಕೆಯಾಗಿದೆ. ವ್ಯವಸಾಯ ಮಂತ್ರಿಗಳಿಗೂ ಪ್ರತ್ಯಕ್ಷವಾಗಿ ಮನವರಿಕೆಯಾಗಿದೆ, ಮಾನ್ಯ ಅಧ್ಯಕ್ಷರಿಗೂ ಮನವರಿಕೆಯಾಗಿದೆ. ಅವರು ಯಾವುದೋ ಒಂದು ಕಾರ್ಯಕ್ರಮಕ್ಕೆ ಹೋಗುವಾಗ ರಸ್ತೆಯಲ್ಲಿ ಬಿದ್ದಿದ್ದಂಥ ಹತ್ತಾರು ಲೋಡು ಟಮೊಟೋವನ್ನು ನೋಡಿ, ಮುಂದೆ ಸಂಚಾರ ಮಾಡಲು ಅವರ ಮನಸ್ಸು ಒಪ್ಪದೇ ವಾಪಸ್ಸು ಬಂದರು ಎನ್ನುವ ವಿಚಾರವನ್ನು ನಾನು ಪತ್ರಿಕೆಯಲ್ಲಿ ಓದಿದ್ದೇನೆ. ರಾಜ್ಯದಲ್ಲಿ ಈ ಪರಿಸ್ಥಿತಿ ಉದ್ಭವವಾಗಿರುವುದು ಕೇವಲ 15 ದಿವಸಗಳ ಹಿಂದೆಯಲ್ಲ, ಕಳೆದ ನಾಲ್ಕೈದು